ಮಾಸಿಕ ಮಿತವೇತನದ ಆಧಾರದ ಮೇಲೆ ಖಾಯಂ ಆಗಿ ಮುಂದುವರೆಸಲಾಗಿರುತ್ತದೆ. ಗ್ರಾಮ ಸಹಾಯಕರು ಮಾಸಿಕ ಮಿತವೇತನದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಅವರುಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚನೆ ಮಾಡದೇ ಇರುವುದರಿಂದ ಖಾಯಂಗೊಳಿಸಲು ಬರುವುದಿಲ್ಲ.

ಡೋಣಿ ನದಿ ಹೂಳೆತ್ತುವುದು

766(1100) ಶ್ರೀ ಪಾಟೀಲ ಎ.ಎಸ್. (ದೇವರ ಹಿಪ್ಪರಗಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಪ್ರತಿ ವರ್ಷ ಬಿಜಾಪುರ ಜಿಲ್ಲೆಯಲ್ಲಿ ಡೋಣಿ ನದಿ ಪ್ರವಾಹದಿಂದ ಅಪಾರ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಿಜಾಪುರ ಜಿಲ್ಲೆಯಲ್ಲಿ ಡೋಣಿ ನದಿ ಎಷ್ಟು ಕಿ.ಮೀ.ವರೆಗೆ ಹಾಯ್ದು ಹೋಗುತ್ತದೆ ಮತ್ತು ಇದರ ಉದ್ದ ಅಗಲಗಳೆಷ್ಟು ಹಾಗೂ ಈ ನದಿಯ ದಂಡೆಯಲ್ಲಿರುವ ಅಕ್ಕಪಕ್ಕದ ಗ್ರಾಮಗಳು ಯಾವುವು ;

ಇ) ಸದರಿ ಡೋಣ ನದಿ ಹೂಳೆತ್ತುವ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ (ವಿವರ ನೀಡುವುದು) ;

ಈ) ಸದರಿ ನದಿ ಹೂಳೆತ್ತುವ ಕಾರ್ಯವನ್ನು ಯಾವ ಇಲಾಖೆಯಿಂದ ಕೈಗೆತ್ತಿಕೊಳ್ಳಲಾಗುತ್ತಿದೆ ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹೌದು.

ಆ) ಬಿಜಾಪುರ ಜಿಲ್ಲೆಯಲ್ಲಿ ಡೋಣಿ ನದಿಯು ಸುಮಾರು 158 ಕಿ.ಮೀ.ವರೆಗೆ ಹಾಯ್ದು ಹೋಗುತ್ತದೆ. ಇದರ ಉದ್ದ 194 ಕಿ.ಮೀ. ಹಾಗೂ ಅಗಲ 40 ರಿಂದ 120 ಕಿ.ಮೀ.

ಈ ನದಿಯ ದಂಡೆಯಲ್ಲಿರುವ ಅಕ್ಕಪಕ್ಕದ ಗ್ರಾಮಗಳ ವಿವರ ಈ ಕೆಳಕಂಡಂತಿವೆ :

ಬಿಜಾಪುರ ತಾಲ್ಲೂಕು :

1) ಕೋಟ್ಯಾಳ, 2) ತಾಜಪೂರ, 3) ದಾಶ್ಯಾಳ, 4) ಧನ್ಯಾಳ, 5) ಕಣಮುಚನಾಳ, 6) ಖತೀಜಾಪೂರ, 7) ಸಾರವಾಡ, 8) ತೋನಶ್ಯಾಳ, 9) ನಂದ್ಯಾಳ, 10) ಯಕ್ಕುಂಡಿ, 11) ಅರ್ಜುಣಗಿ, 12) ಕಾಖಂಡಿಕಿ, 13) ಉಕುಮನಾಳ, 14) ಕಾತ್ರಾಳ, 15) ತೊರವಿ.

ಬ.ಬಾಗೇವಾಡಿ ತಾಲ್ಲೂಕು :

1) ಯಂಭತ್ನಾಳ, 2) ಡೋಣೂರ, 3) ನೇಗಿನಾಳ, 4) ಬಿಸನಾಳ, 5) ಸಾತಿಹಾಳ, 6) ಭೈರವಾಡಗಿ, 7) ಯಳವಾರ, 8) ಸಿಂದಗೇರಿ (ಹಳೆ) 9) ಸಾಸನೂರ, 10) ನಾಗರಾಳ, ಡೋಣ

ಮುದ್ದೇಬಿಹಾಳ ತಾಲ್ಲೂಕು :

1) ಬೋಳವಾಡ.

ಸಿಂಧಗಿ ತಾಲ್ಲೂಕು :

1) ಬೂದಿಹಾಳ ಡೋಣ, 2) ಕೊಂಡಗುಳಿ, 3) ನಂದಗೇರಿ, 4) ಬಿ.ಬಿ.ಇಂಗಳಗಿ, 5) ಮುರಡಿ, 6) ಬ್ರಹ್ಮದೇವನಮಡು, 7) ಯರನಾಳ ಬಿ.ಕೆ. 8) ಖೈನೂರ, 9) ಅಂಬಳನೂರ.

ಇ) ಡೋಣಿ ನದಿ ಪ್ರದೇಶದ ನಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಹಾಗೂ ಹೂಳೆತ್ತುವ ಪೈಲಟ್ ಯೋಜನೆ 2003–04 ರಿಂದ 2005–06 ವರ್ಷದ ಅವಧಿಯೊಳಗೆ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಭೂಸಂಪನ್ಮೂಲ ಇಲಾಖೆಯು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಮೂಲಕ ರೂ.4,82,35,300–00 ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡಿ ಕೇಂದ್ರ ಸರ್ಕಾರವು ತನ್ನ ಪಾಲಿನ ಮೊದಲನೇ ಕಂತಿನ ಅನುದಾನದ ಮೊತ್ತ ರೂ.145.703 ಲಕ್ಷಗಳನ್ನು ಹಾಗೂ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ ರೂ. 81.84 ಲಕ್ಷ ಹಣ ಹೀಗೆ ಒಟ್ಟು 227.543 ಲಕ್ಷ ಹಣ ಕೃಷಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾಗಿತ್ತು. ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಂದ ಕೇವಲ ಸಮೀಕ್ಷೆ, ತರಬೇತಿ, ವಿವರವಾದ ಯೋಜನೆಯ ನಕ್ಷೆ ಇತ್ಯಾದಿ ಮಾತ್ರ ಕೈಗೊಂಡು ರೂ.20.95 ಲಕ್ಷ ಖರ್ಚು ಮಾಡಲಾಗಿದೆ. ಈ ವಿಶ್ವವಿದ್ಯಾಲಯವು ಕೆಲವೊಂದು ಆಡಳಿತಾತ್ಮಕ ಕಾರಣಗಳಿಂದಾಗಿ ಸರ್ಕಾರದ ಆದೇಶ ಸಂಖ್ಯೆ : ಎಹೆಚ್‌ಡಿ 97 ಎಎಂಎಲ್ 2009, ದಿನಾಂಕ : 25.08.2009ರ ಅನ್ವಯ ಈ ಯೋಜನೆಯನ್ನು ಸಣ್ಣ

ನೀರಾವರಿ ಇಲಾಖೆಯಿಂದ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ. ಅದರಂತೆ ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಂದ ರೂ. 2,66,49.133–00 ಗಳನ್ನು ಸಣ್ಣ ನೀರಾವರಿ ಇಲಾಖೆಗೆ ಜಮೆ ಮಾಡಲಾಗಿತ್ತು. ಈ ಪೈಕಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪಾಲಿನ ಹಣ ರೂ.81.84 ಲಕ್ಷಗಳನ್ನು ಸದರಿ ನಿಗಮಕ್ಕೆ ಮರಳಿ ಸಂದಾಯ ಮಾಡಲಾಗಿದೆ.

ಈಗ ಬೃಹತ್ ಮತ್ತು ಮಧ್ಯಮ ನೀರಾವರಿ ಇಲಾಖೆಯಡಿ ಡೋಣಿ ನದಿಯ ಪ್ರವಾಹದಿಂದ ಉಂಟಾಗುವ ಹಾನಿಯನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆ ಯೋಜನೆಯಡಿ ವಿವರವಾದ ಯೋಜನಾ ವರದಿ ತಯಾರಿಸಿ, ಅನುದಾನ ಪಡೆದು ಕಾರ್ಯಗತಗೊಳಿಸುವುದಕ್ಕೆ ಸಲಹೆ/ಶಿಫಾರಸ್ಸು ಪಡೆಯಲು ಸರ್ಕಾರದ ಆದೇಶ ಸಂ : ಜಸಂಇ 16 ಎಂಪಿಎಸ್ 2010, ದಿನಾಂಕ : 09/04/2010 ರನ್ವಯ ಶ್ರೀ ಜಿ.ಎಸ್. ಪರಮಶಿವಯ್ಯ, ನಿವೃತ್ತ ಅಧೀಕ್ಷಕ ಅಭಿಯಂತರರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ : 19/08/2010 ಮತ್ತು ದಿನಾಂಕ : 20/08/2010 ರಂದು ಪ್ರವಾಸ ಕೈಗೊಂಡು ಡೋಣಿ ನದಿ ಪಾತ್ರವನ್ನು ಖುದ್ದಾಗಿ ವೀಕ್ಷಿಸಿ ಮಾಹಿತಿ/ದಾಖಲೆ ಸಂಗ್ರಹಿಸಿದೆ. ಸಮಿತಿಯು ಇಲ್ಲಿಯವರೆಗೆ 3 ಸಭೆಗಳನ್ನು ನಡೆಸಿದ್ದು, ವರದಿಯನ್ನು ನಿರೀಕ್ಷಿಸಿದೆ.

ಈ) ಸಮಿತಿಯಿಂದ ಸಲ್ಲಿಸುವ ವರದಿಯನ್ನು ಪರಿಶೀಲಿಸಿ ನಂತರ ಹೂಳೆತ್ತುವ ಕಾರ್ಯವನ್ನು ಯಾವ ಇಲಾಖೆಯಿಂದ ಕೈಗೆತ್ತಿಕೊಳ್ಳುವುದರ ಬಗ್ಗೆ ನಿರ್ಧರಿಸಲಾಗುವುದು.

ತುಂಗಾ ಮೇಲ್ದಂಡೆ ಯೋಜನಾ ಕಛೇರಿ

768(1060) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಹಿರೇಕೆರೂರು ತಾಲ್ಲೂಕಿನ ರಟ್ಟೆ ಹಳ್ಳಿಯಲ್ಲಿ ಇರುವ ತುಂಗಾ ಮೇಲ್ದಂಡೆ ಯೋಜನಾ ಕಛೇರಿಯಲ್ಲಿ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;